2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ
ಚಿಕ್ಕಮಗಳೂರು

ಸತ್ರ ಮೊಕದ್ದಮೆ ನಂಃ**115/2018**

| | | | |
|---|---|---|---|
| ಸಾಕ್ಷಿದಾರರ ಹೆಸರು | - | ಧರ್ಮೇಗೌಡ | ಪಿಡಬ್ಲ್ಯೂ - 4 |
| ತಂದೆಯ ಹೆಸರು | - | ರುದ್ರೇಗೌಡ | ಸಿಡಬ್ಲ್ಯೂ - 5 |
| ವಯಸ್ಸು | - | 37 ವರ್ಷ | |
| ಉದ್ಯೋಗ | - | ಕೂಲಿ | |
| ವಾಸ ಸ್ಥಳ | - | ಕೋಟೆ, ಚಿಕ್ಕಮಗಳೂರು | |

ದಿನಾಂಕಃ 24-02-2021 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

(4 ನೇ ಆರೋಪಿಯು ಈ ದಿನ ನ್ಯಾಯಾಲಯಕ್ಕೆ ಗೈರು ಹಾಜರಾಗಿದ್ದು, ಅವರ ಗುರುತಿಸುವಿಕೆಯನ್ನು ಅಲ್ಲಗಳೆಯುವುದಿಲ್ಲ ಎಂದು ಅವರ ಪರ ವಕೀಲರು ವಿನಾಯಿತಿ ಅರ್ಜಿ ಸಲ್ಲಿಸಿರುತ್ತಾರೆ)

ಮುಖ್ಯ ವಿಚಾರಣೆ ಮಾನ್ಯ ಪಿ.ಪಿ. ರವರಿಂದ -

1. ನನಗೆ ಸಹಿ ಮಾಡಲು ಬರುತ್ತದೆ. ನನ್ನ ಸಹಿಯನ್ನು ನೋಡಿದರೆ ಗುರುತಿಸುತ್ತೇನೆ. ಈಗ ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿದ್ದು ಅದರಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯ ಸಹಿ ಇರುವ ದಾಖಲೆಯು ಪೊಲೀಸರು ಮಹಜರ್ ಗಾಗಿ ನೀಡಿದ ನೋಟೀಸು ಆಗಿದ್ದು ಅದನ್ನು ನಿ.ಪಿ.13 ಎಂದು ಗುರುತಿಸಲಾಯಿತು ಮತ್ತು ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿ.ಪಿ.13(ಎ) ಎಂದು ಗುರುತಿಸಲಾಯಿತು.

2. ದಿಃ 05.10.2017 ರಂದು ಸಂಜೆ 5.00 ಗಂಟೆಗೆ ಸದರಿ ನೋಟೀಸ್ ನ್ನು ನನಗೆ ಪೊಲೀಸರು ನೀಡಿರುತ್ತಾರೆ. ನನಗೆ ಪೊಲೀಸರು ಠಾಣೆಗೆ

ಬರಲು ಹೇಳಿದ್ದರು. ಅದರಂತೆ ಸಂಜೆ 5 ಗಂಟೆಗೆ ಪೊಲೀಸ್ ಠಾಣೆಗೆ ಹೋಗಿರುತ್ತೇನೆ. ಸದರಿ ಸಮಯದಲ್ಲಿ ಠಾಣೆಯಲ್ಲಿ ಫ್ರಾಸಾ.1 ಕಾವ್ಯಶ್ರೀ ಇದ್ದು ಅವರು ಸುಪ್ರಿತ್ ಮತ್ತು ತಮ್ಮ ಮದುವೆಯ ಪತ್ರಿಕೆ, ಮದುವೆಯ ಪೋಟೋಗಳು ಮತ್ತು Marriage Certificate, ಅವರ ಕೈ ಮತ್ತು ಕಾಲುಗಳಿಗೆ ಬರೆ ಹಾಕಿರುವ ಪೋಟೋಗಳು ಮತ್ತು ಅವರ ಕುತ್ತಿಗೆಗೆ ಚಾರ್ಜರ್ ವೈರ್ ಹಾಕಿ ಬಿಗಿದಿರುವ ಬಗ್ಗೆ ತೆಗೆದ ಪೋಟೋಗಳನ್ನು ಪೊಲೀಸರು ವಶಪಡಿಸಿಕೊಂಡರು ಮತ್ತು ಅದರ ಬಗ್ಗೆ ಪಂಚನಾಮೆ ಮಾಡಿ ನನ್ನ ಸಹಿ ತೆಗೆದುಕೊಂಡಿರುತ್ತಾರೆ. ಸದರಿ ಪಂಚನಾಮೆಗೆ ನನ್ನೊಂದಿಗೆ ರಾಘವೇಂದ್ರ ಎಂಬುವವರು ಸಹಿ ಮಾಡಿರುತ್ತಾರೆ. ಸದರಿ ಮಹಜರ್ ನ್ನು ಸಂಜೆ 5.00 ರಿಂದ 6.00 ಗಂಟೆ ವರೆಗೆ ಮಾಡಿರುತ್ತಾರೆ. ಸದರಿ ಮಹಜರ್ ನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿ.ಪಿ.5 ಎಂದು ಗುರುತಿಲಾಗಿದ್ದು ಮತ್ತು ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿ.ಪಿ.5(ಸಿ) ಎಂದು ಗುರುತಿಸಲಾಯಿತು. ನಮ್ಮ ಮುಂದೆ ಕಾವ್ಯಶ್ರೀ ರವರು ಹಾಜರು ಪಡಿಸಿದ ದಾಖಲಾತಿಗಳು ಮತ್ತು ಪೋಟೋಗಳನ್ನು ನೋಡಿದರೆ ಗುರುತಿಸುತ್ತೇನೆ.

3. ಸಾಕ್ಷಿಯು 1 ನೇ ಆರೋಪಿಯ ಮತ್ತು ಪಿರ್ಯಾದಿ ಕಾವ್ಯಶ್ರೀಯ ಲಗ್ನ ಪತ್ರಿಕೆಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿ.ಪಿ.6 ಎಂದು ಗುರುತಿಸಲಾಗಿದ್ದು ಮತ್ತು ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿ.ಪಿ.6(ಬಿ) ಎಂದು ಗುರುತಿಸಲಾಯಿತು. ಅದೇ ರೀತಿ ಸಾಕ್ಷಿಯು ಮದುವೆ ಪ್ರಮಾಣ ಪತ್ರವನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿ.ಪಿ.7 ಎಂದು ಗುರುತಿಸಿದ್ದು

ಮತ್ತು ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿ.ಪಿ.7(ಬಿ) ಎಂದು ಗುರುತಿಸಲಾಯಿತು. ಅದೇ ರೀತಿ 1 ನೇ ಆರೋಪಿಯೊಂದಿಗೆ ಮದುವೆ ಕಾಲಕ್ಕೆ ಕಾವ್ಯಶ್ರೀ ಇರುವ ಪೋಟೋವನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿ.ಪಿ.8 ಎಂದು ಗುರುತಿಸಲಾಗಿರುತ್ತದೆ. ಸಾಕ್ಷಿಯು ಇನ್ನೊಂದು ಪೋಟೋವನ್ನು ನೋಡಿ ಗುರುತಿಸಿದ್ದು ಅದರಲ್ಲಿ ಪಿರ್ಯಾದಿ ಕಾವ್ಯಶ್ರೀ ಇವರ ಕುತ್ತಿಗೆಗೆ ಆದ ಗಾಯವನ್ನು ತೋರಿಸುತ್ತಿರುವ ಚಿತ್ರ ಣ ಕಂಡು ಬರುತ್ತದೆ ಅದನ್ನು ಈಗಾಗಲೇ ನಿ.ಪಿ.9 ಎಂದು ಗುರುತಿಸಲಾಗಿದೆ. ಅದೇ ರೀತಿ ಸಾಕ್ಷಿಯು ಇನ್ನು 2 ಪೋಟೋಗಳನ್ನು ನೋಡಿ ಗುರುತಿಸಿದ್ದು ಅವುಗಳಲ್ಲಿ ಪಿರ್ಯಾದಿ ಕಾವ್ಯಶ್ರೀ ಇವರ ಕೈ ಮತ್ತು ಕಾಲುಗಳಿಗೆ ಆದ ಗಾಯಗಳ ಚಿತ್ರ ಣ ಕಂಡು ಬರುವ ಪೋಟೋಗಳು ಎಂದು ಗುರುತಿಸಿರುತ್ತಾರೆ. ಅವುಗಳನ್ನು ಈಗಾಗಲೇ ಕ್ರ ಮವಾಗಿ ನಿಪಿ.10 ಮತ್ತು 11 ಎಂದು ಗುರುತಿಸಲಾಗಿದೆ. ಸದರಿ ನಿ.ಪಿ.9 ರಿಂದ 11 ಪೋಟೋಗಳಲ್ಲಿ ಪಿರ್ಯಾದಿ ಕಾವ್ಯಶ್ರೀ ಇವರಿಗೆ ಗಾಯಗಳು ಆಗಿರುವ ಬಗ್ಗೆ ಕಂಡು ಬರುತ್ತದೆ.

<u>ಪಾಟೀ ಸವಾಲು ಶ್ರೀ ವಿ.ಟಿ.ಟಿ. ವಕೀಲರಿಂದ – ಆರೋಪಿತರ ಪರವಾಗಿ</u>

4. ನನಗೆ ಪೊಲೀಸರು 5 ಗಂಟೆಗೆ ನೋಟೀಸು ನೀಡಿದ್ದು ಅದರಂತೆ ನಾನು 5.00 ಗಂಟೆಗೆ ಪೊಲೀಸ್ ಠಾಣೆಗೆ ಹೋಗಿರುತ್ತೇನೆ. ಆ ಸಮಯದಲ್ಲಿ ನಾನು ಟೌನ್ ನಲ್ಲಿ ರಾಘವೇಂದ್ರ ಎಂಬುವವರ ಜೊತೆ ಇದ್ದೆನು. ನನ್ನನ್ನು ಸದರಿ ರಾಘವೇಂದ್ರ ಅವರೇ ಪೊಲೀಸ್ ಠಾಣೆಗೆ ಕರೆದುಕೊಂಡು ಹೋಗಿರುತ್ತಾರೆ. ರಾಘವೇಂದ್ರ ಇವರು

ಪೊಲೀಸರು ಇರುವುದಿಲ್ಲ. ಸದರಿ ನೋಟೀಸ್ ನ್ನು ನನಗೆ ಪೊಲೀಸರು ಠಾಣೆಯಲ್ಲಿ ನೀಡಿರುತ್ತಾರೆ. ಪಿರ್ಯಾದಿ ಕಾವ್ಯಶ್ರೀ ಇವರ ತಂದೆ ರಾಜೇಗೌಡ ಪೊಲೀಸರಾಗಿ ನಿವೃತ್ತರಾಗಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಪಿರ್ಯಾದಿ ಕಾವ್ಯಶ್ರೀ ಇವರನ್ನು ನಾನು ಈ ಹಿಂದೆ ನೋಡಿರುವುದಿಲ್ಲ. ಪಿರ್ಯಾದಿ ಕಾವ್ಯಶ್ರೀ ಇವರ ತಂದೆ ರಾಜೇಗೌಡ ಇವರು ಪೊಲೀಸರಾಗಿ ನಿವೃತ್ತರಾದ ಬಗ್ಗೆ ಗೊತ್ತಿದ್ದರು ಕೂಡ ಅವರು ನನಗೆ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಠಾಣೆಯಲ್ಲಿ ಮಹಜರ್ ಮಾಡುವ ಕಾಲಕ್ಕೆ ಪಿರ್ಯಾದಿ ಕಾವ್ಯಶ್ರೀ ಮತ್ತು ಅವರ ತಂದೆ ರಾಜೇಗೌಡ ಇದ್ದರು.

5. ನಾನು 8 ನೇ ತರಗತಿವರೆಗೆ ವಿಧ್ಯಾಭ್ಯಾಸ ಮಾಡಿರುತ್ತೇನೆ. ನಿ.ಪಿ.5 ಮಹಜರ್ ಗೆ ನಾನು ಸಹಿ ಮಾಡುವ ಕಾಲಕ್ಕೆ ಅದು ಖಾಲಿ ಪೇಪರ್ ಆಗಿತ್ತು ಎಂದರೆ ಸರಿಯಲ್ಲ. ಪಿರ್ಯಾದಿ ಕಾವ್ಯಶ್ರೀ ಇವರ ತಂದೆ ರಾಜೇಗೌಡ ಇವರು ನನಗೆ ಪರಿಚಯಸ್ಥರಿದ್ದು 1 ನೇ ಆರೋಪಿಯನ್ನು ಉದ್ದೇಶ ಪೂರ್ವಕವಾಗಿ ದುರುದ್ದೇಶದಿಂದ ಜೈಲಿಗೆ ಕಳುಹಿಸಲು ಅವರೊಂದಿಗೆ ಸೇರಿಕೊಂಡು ಅವರ ಮಾತು ಕೇಳಿ ನಾನು ಸದರಿ ದಿನ ಠಾಣೆಗೆ ಹೋಗದೇ ಇದ್ದರು ಮತ್ತು ಅಲ್ಲಿ ಯಾವುದೇ ಮಹಜರ್ ನ್ನು ನನ್ನ ಸಮಕ್ಷಮ ಜರುಗಿಸಿ ನಾನು ಹೇಳಿದ ಪೋಟೋಗಳನ್ನು ಮತ್ತು ಲಗ್ನ ಪತ್ರಿಕೆಗಳನ್ನು ನನ್ನ ಸಮಕ್ಷಮ ಪೊಲೀಸರು ಅಮಾನತ್ತು ಪಡಿಸಿಕೊಳ್ಳದೇ ಇದ್ದರು ಪಿರ್ಯಾದುದಾರರ ತಂದೆ ಮಾತು ಕೇಳಿಕೊಂಡು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

6. ನಿ.ಪಿ.9 ರಿಂದ 11 ಪೋಟೋಗಳಲ್ಲಿ ಕಾಣುವ ಗಾಯಗಳು ದಿಃ

05.10.2017 ರಲ್ಲಿ ಆಗಿರುವ ಗಾಯಗಳು ಎಂದು ತಿಳಿದುಕೊಂಡಿರುತ್ತೇನೆ. ಸದರಿ ಗಾಯಗಳು ಕಾವ್ಯಶ್ರೀ ಇವರಿಗೆ ಹೇಗೆ ಆಗಿರುತ್ತವೆ ಎಂಬುದನ್ನು ನಾನು ತಿಳಿದುಕೊಂಡಿರುವುದಿಲ್ಲ. ಮಹಜರ್ ಮಾಡಿದ ಕಾಲಕ್ಕೆ ಸ್ಥಳದ ಚಕ್ಕುಬಂದಿ ನನಗೆ ಗೊತ್ತಿಲ್ಲ. ನಾನು ಪೊಲೀಸ್ ಠಾಣೆಗೆ ಹೋಗದೇ ಇರುವುದರಿಂದ ನನಗೆ ಮಹಜರ್ ಮಾಡಿದ ಸ್ಥಳದ ಚಕ್ಕುಬಂದಿ ಗೊತ್ತಿರುವುದಿಲ್ಲ ಎಂದರೆ ಸರಿಯಲ್ಲ.

7. ನನಗೆ ಪೊಲೀಸರು ಮಹಜರ್ ಸಂಬಂಧಿಸಿದಂತೆ ಯಾವುದೇ ನೋಟೀಸ್ ನ್ನು ನೀಡಿರುವುದಿಲ್ಲ, ಯಾವುದೇ ಪೋಟೋಗಳನ್ನು ನನ್ನ ಸಮಕ್ಷಮ ವಶಪಡಿಸಿಕೊಂಡಿರುವುದಿಲ್ಲ ಮತ್ತು ನನ್ನ ಸಮಕ್ಷಮ ಯಾವುದೇ ಮಹಜರ್ ನ್ನು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಪಿರ್ಯಾದುದಾರರ ಮತ್ತು ಅವರ ತಂದೆ ಮಾತು ಕೇಳಿಕೊಂಡು ಆರೋಪಿಗಳ ವಿರುದ್ಧ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆ - ಇಲ್ಲ</u>

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

Sd/-
(ಮಂಜುನಾಥ ಸಂಗ್ರೇಶಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ

ಮಾ.